ಮಾಸ್ತರರ ಮಾತನ್ನು ಯೋಚಿಸುತ್ತ ಶ್ರೀಪತಿ ಹಂಚಿನ ಪಡಿಮಾಡಿನ ಉದ್ದನೆಯ ಅಡುಗೆ ಮನೆಗೆ ಬಂದ. ಅಪ್ಪನ ನೆನಪಿನ ಪಳೆಯುಳಿಕೆಗಳನ್ನು ಹುಡುಕಿದ. ಗೋಡೆಯಿಂದ ಹೊರಚಾಚಿ ನಿಂತ ಅದೇ ಬೀಟೆ ಕಂಬಗಳು; ದಪ್ಪ ಚೌಕಟ್ಟಿನ ತೆರೆದ ಕಿಟಕಿಗಳು; ಒಂದು ಕೊಳಗ ಅಕ್ಕಿ ಚರಿಗೆಯಲ್ಲಿ ಅನ್ನ ಬೇಯಿಸುವ ಮಣ್ಣಿನ ದೊಡ್ಡ ಒಲೆ; ಮುಚ್ಚಿಟ್ಟ ತೆರೆದ ಬಾಯಿಯ ಬೃಹತ್ ಒಳ್ಳು, ಮಾಡಿನ ಹಂಚು ಮತ್ತು ಪಕಾಸಿಗೆ ಅಂಟಿಕೊಂಡ ಹೊಗೆಕರಿ, ಮೋಟು ಗೋಡೆ ದಾಟಿದರೆ ನೂರಾರು ವರ್ಷ ಹಳೆಯ ಹಂಡೆಯ ಬಚ್ಚಲು. ಯಮುನಕ್ಕನನ್ನು ಕರೆದು, 'ಅಕ್ಕಾ ಇಲ್ಲಿ ಮೊದ್ಲಿಗೆ ಅಡಿಗೆ ಅಬ್ಬರ ಇರ್ತಿತ್ತಲ್ಲ, ಅದೇ ಹಳೇ ಕಾಲದ ಗದ್ದಲ ಎಬ್ಬಿಸಿ ನೋಡ್ವಾ. ಅಪ್ಪಯ್ಯಂಗೆ ನೆನಪಾದ್ರೂ ಆಯ್ತು' ಎಂದ. 'ಅಕ್ಕಿ ರೊಟ್ಟಿ ಅವ್ರಿಗೆ ರಾಶಿ ಪ್ರೀತಿ. ಆ ಹಗರಣ ನೋಡ್ಲಿ' ಅವಳೂ ಇಂಥಾದ್ದೊಂದು ಉಪಾಯವನ್ನು ಕಾಯುತ್ತಿದ್ದಳು.

ಮಾಸ್ತರರ ಸೈಕಲ್ ಸವಾರಿ ಬರುವಷ್ಟರಲ್ಲಿ ಕಟ್ಟೆಮನೆಯ ಅಡುಗೆ ಒಳದಲ್ಲಿ ಹಬ್ಬದ ಸಡಗರ ತುಳುಕುತ್ತಿತ್ತು. ಚೌತಿಯ ಗಣೇಶ ವಿಗ್ರಹದಂತೆ ಜನಾರ್ದನನನ್ನು ಮಣೆಯ ಮೇಲೆ ಕೂರಿಸಿದ್ದರು. ಉಪ್ಪರಿಗೆ ಮನೆಯೊಳಗೆ ಮುಸ್ಸಂಜೆಗೆ ಕತ್ತಲು ಕವಿದಿತ್ತು. ಶ್ರೀಪತಿ ಹಚ್ಚಿದ ತಾಮ್ರದ ಚಿಮಣಿ ದೀಪ ಹೊಗೆ ಉಗುಳುತ್ತ ಪ್ರಾಚೀನ ಸೊಬಗನ್ನು ಚೆಲ್ಲಿತ್ತು. ಗಜಾನನ ಮೋಟು ಗೋಡೆಯ ಹಿತ್ತಲ ಚಿಟ್ಟೆಯಲ್ಲಿ ಹುಗಿದ ಒಳ್ಳಲ್ಲಿ ಬೆಳ್ಳುಳ್ಳಿ ಮಸಾಲೆ ಕೆಂಪು ಕಲಕವನ್ನು ರುಬ್ಬುತ್ತಿದ್ದ ಸದ್ದು ಸಂಧ್ಯಾಕಾಲದ ಕವಿತೆಯಂತೆ ಕೇಳುತ್ತಿತ್ತು. ಯಮುನಕ್ಕ ಶಾಲಾ ದಿನಗಳನ್ನು ಗಂಡನಿಗೆ ನೆನಪಿಸಲು ಉರಿಯುತ್ತಿದ್ದ ಕೊಳ್ಳಿ ಹಿಡಿದು ಬಚ್ಚಲಿಗೆ ಬಂದಳು. ಶ್ರೀಪತಿ ಅವನ ಕೈ ಹಿಡಿದು ಬಚ್ಚಲೊಲೆಯ ರೌದ್ರಾವತಾರದ ಬೆಂಕಿ ಎದುರು ಕೂರಿಸಿದ. ಅಂದಿನ ಹೊಗೆ ಒಲೆಯ ಚಿತ್ರ ಅವನನ್ನು ಕಂಪಿಸಲಿಲ್ಲ. ಯಮುನಕ್ಕ ಮಣೆ ಮುಚ್ಚಿದ ಒದ್ದೆ ಪಂಜಿಯ ಮೇಲೆ ಅಕ್ಕಿಯ ಹಸಿಯಾದ ಬಿಸಿ ಹಿಟ್ಟಿನ ಉಂಡೆಯನ್ನು ಅಂಗೈಯಲ್ಲಿ ತಟ್ಟಿ ಅರಳಿಸುತ್ತ, ಬೆರಳಿಂದ ತಟ್ಟಿ, ನಾಜೂಕಾಗಿ ಮೃದು ಗೋಲ ರೊಟ್ಟಿಯನ್ನೆತ್ತಿ ಆಚೀಚೆ ಉರಿಯ ಕೆನ್ನಾಲಿಗೆ ಚಾಚಿದ ಒಲೆಯ ಮೇಲಿನ ಹಂಚಿಗೆ ರಪ್ಪೆಂದು ಅಪ್ಪಳಿಸಿದಳು. ಕಾವಲಿಯಿಂದ ಮಗುಚಿ ಬೇಯಿಸುತ್ತ ಪದರು ಬಿಡುತ್ತಿದ್ದಂತೆ ಅದನ್ನು ಎತ್ತಿ, ಕೊಳ್ಳಿ ಹಿಂದಕ್ಕೆಳೆದು ನಿಗಿನಿಗಿ ಕೆಂಡದ ಮೇಲೆ ಉರುಳಾಡಿಸಿದಳು. ಹಬೆಗೆ ಚೆಂಡಿನಂತೆ ಉಬ್ಬಿದ ರೊಟ್ಟಿಯನ್ನು ಗಂಡನ ಬಾಳೆ ಎಲೆಯಲ್ಲಿಟ್ಟಳು. ಗಜಾನನ ಚಟ್ನಿ ಬಡಿಸಲು ಬಾಗುತ್ತಿದ್ದಂತೆಯೇ ಕಂಬದ ನೇರಕ್ಕೆ ನಿಂತಿದ್ದ ಮಾಸ್ತರರನ್ನು ನೋಡಿದ ಜನಾರ್ದನ, 'ಮಗ್ಗಿ ಮಾಸ್ತರು ಬಂದ್ರು. ಅವ್ರಿಗೆ ಬಡಿಸು' ಎಂದ. ಶ್ರೀಪತಿ ಮರುಜನ್ಮ ಬಂದಂತೆ ಉದ್ವಿಗ್ನತೆಯಲ್ಲಿ ಉಕ್ಕುತ್ತ 'ಪಕ್ಕದಲ್ಲೆ ಮಣೆ-ಎಲೆ ಹಾಕಿ, ಇಬ್ರಿಗೂ ಬಡಸ್ತೆ' ಎಂದ. ಇಣುಕುತ್ತಿದ್ದ ವರ್ತಮಾನದಿಂದ ಮರುಕ್ಷಣ ಹೊರಳದಂತೆ ತಡೆಯಲು ಜನಾರ್ದನನನ್ನು ಮುನ್ನುಗ್ಗಿಸುವ ಯತ್ನದಲ್ಲಿ ಮಾಸ್ತರರು ತುದಿಗಾಲಲ್ಲಿ ಚೂಪಾಗಿ ಕೂತು, ಸಂಜೆಯ ಉತ್ಸವ ಅವನ ದೃಷ್ಟಿಯಲ್ಲಿ ಹೂತುಹೋದ ಅವಶೇಷವನ್ನು ಬೆಳಗಿಸುತ್ತಿದೆಯೊ ಸದ್ಯವನ್ನು ಮರೆಯಾಗಿಸಿದ ಮಂಜು ಪರದೆಯನ್ನು ಸರಿಸಬಹುದೊ ಎಂದು ಕಾತರದಿಂದ ನೋಡಿದರು. ಮಗ್ಗಿ ಮಾಸ್ತರರೆಂದು ಜನಾರ್ದನ ಗುರುತಿಸಿದ್ದು ಅವರಿಗೆ ಗೆಲುವಾಗಿತ್ತು. ವರ್ಗವಾಗಿ ಹೋಗುತ್ತಿದ್ದ ಶಾಲೆಗಳಲ್ಲಿ ಅವರು ಪ್ರತಿದಿನ ಸಂಜೆ ಶಾಲೆಯ ಅಡ್ಡ ನೆರಳ ಅಂಗಳದಲ್ಲಿ ಸಾಲಾಗಿ ಮಕ್ಕಳನ್ನು ನಿಲ್ಲಿಸಿ ಮಗ್ಗಿ, ಕಾಲು, ಅರ್ಧ, ಪಂಚಾಂಗ ಬಾಯಿಪಾಠ ಮಾಡಿಸುತ್ತಿದ್ದರು. ರೂಢಿಯಿಂದ ಅವು ಅದೆಷ್ಟು ಗಟ್ಟಿಯಾಗಿ ಮಕ್ಕಳ ನೆನಪಲ್ಲಿ ನಿಂತಿದ್ದವೆಂದರೆ ನಿದ್ದೆಗಣ್ಣಲ್ಲೂ ತಪ್ಪದೆ ಪಾಠ ಒಪ್ಪಿಸುತ್ತಿದ್ದರು. ಪಾಟಿಯ ಸಹಾಯವಿಲ್ಲದೆ ಬಾಯಲ್ಲೆ ಲೆಕ್ಕ ಮಾಡುವ ಪರಿಣತಿಯ ಪ್ರಯೋಜನವನ್ನು ಪಡೆದ ಎಲ್ಲ ಮಕ್ಕಳ ಪಾಲಕರು 'ಮಗ್ಗಿ ಮಾಸ್ತರು' ಎಂದು ಕರೆಯುತ್ತಿದ್ದರು. ನಕಾಶೆಯಲ್ಲಿ ಅವರು ಮಾಡಿಸುತ್ತಿದ್ದ ವಿಶ್ವಪರ್ಯಟನ ಮರೆಯುವಂತಿರಲಿಲ್ಲ. ಹೊಸ ತಲೆಮಾರಿನವರಿಗೆ ಈ ಅನ್ವರ್ಥಕ ಗೊತ್ತಿಲ್ಲ. ಅಂದರೆ, ಜನಾರ್ದನ ಮೂವತ್ತು ವರ್ಷಗಳ ಹಿಂದೆ ಇದ್ದಾನೆ ಎಂದರ್ಥ. ಆ ದಾರಿ ಹಿಡಿದು ನಿಧಾನ ಬರಲಿ ಎಂದು ಕಾಯುತ್ತಿದ್ದಾಗ ಜನಾರ್ದನ, 'ಪಾಗಾರಿ ಪುಂಡ ಇದ್ದಲ್ಲಿ ಒಂದಿನ ಹೋಗಿ ಬರುವಾ' ಎಂದು ಬಿಟ್ಟ. 'ಮಗ್ಗಿ ಮಾಸ್ತರು', ಪಾಗಾರಿ ಪುಂಡ' ಎಂಬ ನಾಮ ಪ್ರಯೋಗ ಕಾದಂಬರಿಯಲ್ಲಿ ಆಗಿದೆ. ಅವನು ಕಾದಂಬರಿ ಪ್ರಪಂಚವನ್ನು ಬಿಟ್ಟು ಹೊರಗೆ ಬಂದಂತಿಲ್ಲ. ಪುಸ್ತಕದಿಂದ ಅವನು ಹೊರಗೆ ಬರ್ಬೇಕು. ನಾಳೆ ಹೊರಗೆ ಸುತ್ತಾಡಿಸಿ ಬರ್ತೆ', ಮಾಸ್ತರು ರೊಟ್ಟಿ